ಸ್ರ 1907—08ನೆ ಇಸವಿ ಮಿ॥ ಅರ್ಜೀ ನಂಬರು 273.

ಕೋಲಾರದಲ್ಲಿ ಇದ್ದ ನರಸಪ್ಪನವರ ಹೆಂಡತಿ ಮೈತಪಟ್ಟ ತಿಪ್ಪಮ್ಮನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರರು ಕೋಲಾರದಲ್ಲಿ ಅಸಿಸ್ಟೆಂಟ್ ಇಂಜನೀಯರ್ ಆಗಿರುವ N. ರಾಮರಾವ್, ಮೃತಪಟ್ಟ ಸದರೀ ತಿಪ್ಪಮ್ಮನವರಿಗೆ ಖಾಸಾ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಕೋಲಾರದ ಸ್ಥಳಿದ ರಾಮರಾಯರೆಂಬುವರು ಕೋಲಾರದಲ್ಲಿ ವಾಸಸ್ಥರಾಗಿ ಮೃತಪಟ್ಟ ತಿಪ್ಪಮ್ಮನವರ ಜೆಂದಗಿ ಬಗ್ಯಾಗಿ ಬರತಕ್ಕ 4,500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ರಾಮರಾಯರ ಅರ್ಜಿಯನ್ನು ಸ್ರ 1907ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 11ರ ಲ್ಲೂ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಪ್ಪಮ್ಮನ ವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1907ನೆ ಇಸವಿ ಸೆಪ್ಟಂಬರ್ ತಿಂಗಳು 23ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ರ 1907—08ನೆ ಇಸವಿ ಮಿ॥ ಅರ್ಜೀ ನಂಬರಿ 312.

ಬೆಂಗಳೂರು ಪೊಲೀಸ್ ಇನ್‌ಸ್ಪೆಕ್ಟರಾಗಿದ್ದು ಮೃತಪಟ್ಟ ರಾಮಚಂದ್ರರಾವ್ ಆಸ್ತೀ ವಿಷಯದಲ್ಲಿ—

ಅಜೀದಾರರು ಎಲ್. ತ್ರಿನಿವಾಸೈಯ್ಯ, ಮೃತಪಟ್ಟ ಸದರೀ ರಾಮಚಂದ್ರರಾಯರಿಗೆ ಖಾಸಾ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳಿದ ವಾಸಸ್ಥರಾಗಿ ಮೃತಪಟ್ಟ ರಾಮಚಂದ್ರರಾಯರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ತ್ರಿನಿವಾಸೈಯ್ಯನವರ ಅರ್ಜಿಯನ್ನು ಸ್ರ 1907ನೆ ಇಸವಿ ಅಕ್ಟೋಬರ್ ತಾರೀಖು 11ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಚಂದ್ರ ರಾವ್ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1907ನೆ ಇಸವಿ ಸೆಪಟಂಬರ್ ತಿಂಗಳು 16ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ರ 1906—07ನೆ ಇಸವಿ ಮಿ॥ ಅರ್ಜೀ ನಂಬರ್ 722.

ಅರ್ಜಿದಾರರು ಬೆಂಗಳೂರು ಗೊಲ್ಲರಪ್ಯಾಟೇಲಿರುವ ಕಡಾಕಲು ಮುನಿಸಾಮಪ್ಪನ ಹೆಂಡತಿ ದೊಡ್ಡಪಿಳ್ಳಮ್ಮ, ವೈನರಾದ ಬೆಂಗಳೂರು ಸ್ಥಳಿದ 1ನೆ ದಾಸಪ್ಪ, 2ನೆ ಸಂಜೀವಪ್ಪ, ಇವರುಗಳ ಆಸ್ತೀ ವಿಷಯದಲ್ಲಿ—

ಸದರಿ ವೈನರಾದ ದಾಸಪ್ಪ ಮತ್ತು ಸಂಜೀವಪ್ಪ ಇವರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಗೊಲ್ಲರಪೇಟೆ ಸ್ಥಳಿದ ದೊಡ್ಡಪಿಳ್ಳಮ್ಮನು ಸದರೀ ವೈನರುಗಳ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾಳೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ರ 1907ನೆ ಇಸವಿ ಅಕ್ಟೋಬರ್ ತಿಂಗಳು 11ನೆ ಶುಕ್ರವಾರ ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

1907ನೆ ಇಸವಿ ಸೆಪ್ಟಂಬರ್ ತಿಂಗಳು 16ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಜೆ. ಎಚ್. ಭಾಭಾ,
ಸಬ್ ಜಡ್ಜ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

ಇಸ್ತಿಹಾರ್.

ತಾರೀಖು 30ನೆ ಸಪ್ಟಂಬರ್ 1907.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನಮೆಂಟಿನಿಂದ ಸದರಿ 21—6—1901ನೆ ಮ ಕ್ರಾಂ 17691—L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮಜ್ಜನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಬಸವನಗುಡಿ ಮತ್ತು ಮಲ್ಲೇಶ್ವರ ಎಕ್ಸ್‌ಟೆರ್ಷನ್‌ಗೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನು ಸ್ರ 1907ನೆ ಇಸವಿ ಅಕ್ಟೋಬರ್ ತಾರೀಖು 10—11ರಲ್ಲು ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಇರುತ್ತಾಗಿ ಹರಾಜಿಲ್ಲಿ ಛಡಿಸವಾಲು ಮೂಲಕ ಪಡದುಕೊಳ್ಳಲು ಇಸ್ತುವಳ್ಳವರು ಅದೇ ತಾರೀಖು ಮೃತಕಾಲ 8 ಘಂಟೆ ಲಾಗಾಯಿತು ಆವಾಯು ಸೈಟುಗಳ ಒಳ ಹಾಜರಿದ್ದು ಛಡಿಸವಾಲು ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ವಳಪಟ್ಟು ಛಡಿ ಸವಾಲ್‌ನಲ್ಲಿ ಪಡಮಾಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರ್ತಿಸದೆ ನಿಲ್ಲುವ ಸೈಟುಗಳನ್ನು ಮರು ದಿವಸಗಳಲ್ಲಿ ಅದೇ ಟೈಮಿನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಬಸವನಗುಡಿ ಎಕ್ಸ್‌ಟೆರ್ಷನ್.

ಬ್ಲಾಕ್ ನಂಬರ್ I	101 & 102.	110 × 30
,, VII	202-203-204-206-207	120 × 30

ಮಲ್ಲೇಶ್ವರ ಎಕ್ಸ್‌ಟೆರ್ಷನ್.

ಬಿಗ್ ಹೌಸ್ ಸೈಟುಗಳು	35—34	153 × 235
	27	157 × 235
	46 & 47	205 × 235
ಹಿಂದೂ ಬ್ಲಾಕ್	358-359-360-373-374-375-377-378	100 × 30

ಈ ಸೈಟ್‌ನಲ್ಲಿ ಹಳೇ ತುವಕ್ಕೂರು ರಸ್ತೆ ಪೂರ್ತಿ ಮಾಡತಕ್ಕಭಾಗ ಕೇರಿದೆ.

2 B

1. ಹರಾಜು ಬೈದಾದ ಕೂಡ್ಲೆ ಛಡಿ ಸವಾಲ್ ಮೊಬಲಗಿನಲ್ಲಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಬರುವ ನಷ್ಟಕ್ಕೆ ಮೊದಲು ಛಡಿಸವಾಲ್‌ದಾರನ್ನು ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗಂದರೆ ಛಡಿಸವಾಲ್ ಮೊಬಲಗ್ಗೆ ಭರ್ತಿಯಾಗಿ ಕೊಡತಕ್ಕ ಕೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡಿಸವಾಲ್‌ದಾರ ಹಾಜರಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ತಂದುಮಾಡಿ ಬರುವ ನಷ್ಟಕ್ಕೆ ಮೊದಲು ಛಡಿಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡ್ಲೆ ಸೈಟನ್ನೆ ಛಡಿಸವಾಲ್‌ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಪುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕ ಪ್ರಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ತಾತ್ಕಾಯಂ ಕಟ್ಟಡ ಯಾವದನ್ನೂ ಕಟ್ಟಿಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹೆಂಚಿನದಾಗಿಯಾಗಲಿ ಅಥವಾ ತಾರಸೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೀನಾ ಪಾಕೀಜಾ ಬಗ್ಗೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೊಹರಿ ತರಹೆ ಮತ್ತು ಜಾಗೆ ಸಹ ಸ್ಯಾನಿಟರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಬಂದು ಮತ್ತ, ಪಣ ಅಥವಾ ಜಾತಿಯನರಿಗೆ ವಿರ್ಪಡಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪಿತದ ಮೇಲೆ ಡಿಪ್ಯುಟಿ ಕಮಿಷರ್ಡರವರು ಮಂಜೂರ್ಮಾಡಿದ ಹೊರ್ತು ಇತರ ಮತ್ತ, ಪಣ ಯಾ ಜಾತಿಯವರು ವಾಸಾ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯತ್ಕಿಂಚಿತ್ತಾದರಕ್ಕಾಗಲಿ ಬೇಕಾಗುವ ಮಣ್ಣನ್ನ ಸ್ಯಾನಿಟರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲಿ ತೆಗದುಕೊಳ್ಳತಕ್ಕದ್ದು.

10. ಮೇಲ್ಕಂಡ ಪರತ್ತುಗಳ ಪೈಕಿ ಯಾವದಕ್ಕಾದರು ತಪ್ಪು ನಡದಲ್ಲಿ ಕೊಡಲ್ಪಟ್ಟರುವ ನಿವೇಶನವನ್ನ ಹಿಂದುಳ್ಳೀದಾರನು ಮತ್ಯಾವ ವಿಚಾರಣೆಯೂ ಇಲ್ಲದೆ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಪರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪು ನಡೆದದ್ದಕ್ಕೋಸ್ಕರ ನಿವೇಶನವನ್ನ ಸರ್ಕಾರಕ್ಕೆ ಕೀರಿಸಿಕೊಂಡ ಬಳಿಕ ಹಿಂದುಳ್ಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹರ ದ್ರವ್ಯಕ್ಕು ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕು ದಾರ್ಯಾಗುವದಿಲ್ಲ.

ಎಂ. ಜಿ. ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್.

ನೋಟಿಸ್.

ಸಿವಿಲ್ ಪ್ರೊಸಿಜ್ಯರ್ ಕೋಡು 30ನೆ ಸೆಕ್ಷನ್ ಮೇರೆ ಮೈಸೂರು ಅಡಿಷನಲ್ ಮುನಸೀಫ್ ಕೋರ್ಟ್‌ನಲ್ಲಿ.

1904—1905ನೆ ಇಸವಿ ಸಿವಿಲ್ ನಂಬರು 92.
1906—1907ನೆ ಇಸವಿ ಅಮಲ್‌ಜಾರಿ ನಂಬರು 513.

ವಾದಿ.
ನರಸಿಂಹರಂಗಾಚಾರ್.

ಪ್ರತಿವಾದಿಗಳು.
ಅಯ್ಯನಯ್ಯಂಗಾರ್ ವಗೈರೇರು.

ಇದರಿಂದ ಸಮಸ್ತ ವೃತ್ತಿವಂತರಿಗೂ ಮತ್ತು ಜನಗಳಿಗೂ ತಿಳಿಯಪಡಿಸುವದೇನೆಂದರೆ :—ಮೇಲ್ಕಂಡ ಸಿವಿಲ್ ನಂಬರಿನಲ್ಲಿ ಹೊಸೂರು-ಹಳಿಯೂರು ಗ್ರಾಮಗಳ ವಸೂಲಾತಿಗೋಸ್ಕರ, ಕೋರ್ಟಿನಿಂದ ಮೈಸೂರಲ್ಲಿರುವ ಅಡ್ವೋಕೇಟ್ ಮೆ|| ಎಸ್. ರಂಗಸ್ವಾಮೈಯ್ಯಂಗಾರ್‌ನ್ನು ರಿಸೀವರನ್ನಾಗಿ ಹೊಕರೂರು ಮಾಡಿ ಇರುವದು ಸರಿಯಷ್ಟೆ. ಸದರೀಯವರ ಬಾಬತು ಲೆಕ್ಕ್ತಗಳನ್ನು ತನಿಖೆ ಮಾಡುವದಕ್ಕೂ ಮೇಲ್ಕಂಡ ಗ್ರಾಮಗಳಲ್ಲಿ ವಸೂಲಾದ ಹೊಬಲಗಿನಲ್ಲಿ ಜಮಾಖರ್ಚು ಲೆಕ್ಕಾಚಾರ ಪ್ರಕಾರ ಜಾತಾ ಉಳಿದ ಮೊಬಲಗನ್ನು ವೃತ್ತಿವಂತರಿಗೆ ದಾವಾಷಾ ಮೇರೆ ಹಂಚಲು 1907ನೆ ಇಸವಿ ನವಂಬರು 3ನೆ ಭಾನುವಾರ ಹಿಯರಿಂಗ್ ಇಡಲ್ಪಟ್ಟಿರುತ್ತೆ. ಸದರೀ ಹಿಯರಿಂಗಿನ ದಿವಸ ದಿವಿ 12 ಘಂಟೆಗೆ ಸರಿಯಾಗಿ ಹಕ್ಕು ಬಾಧ್ಯತೆ ಇರತಕ್ಕ ಮೇಲ್ಕಂಡ ಗ್ರಾಮಗಳ ಎಲ್ಲಾ ವೃತ್ತಿವಂತರು ಆಗಲಿ ಯಾ ಅವರ ಕಡೆ ಲಾಯರೇ ಆಗಲಿ ಕೋರ್ಟು ರೂಬರೂಬು ಹಾಜರಾಗಿ ತಿಳಿಯಪಡಿಸತಕ್ಕದ್ದು.

(By order)
N. D. SESHANNA,
Head Munshi.